ಯುವ ದಲಿತ ವಿದ್ವಾಂಸರ ಆಕಾಂಕ್ಷೆಯ ವ್ಯಾಪ್ತಿಯನ್ನು ತಲುಪಿದೆ ಎಂದೆನಿಸುತ್ತದೆ.

◆ **ಸಾಹಿತ್ಯದ ವಿದ್ಯಾರ್ಥಿಯಾದ ನಾನು, ಕನ್ನಡ ವಿಮರ್ಶೆ ಮತ್ತು ಸಂಶೋಧನೆಯನ್ನು ಸಹ ಶ್ರೀಮಂತಗೊಳಿಸುವ ಹಾಗೂ ಸಾಹಿತ್ಯ ಅಧ್ಯಯನಗಳಿಗೆ ಮೂಲಭೂತವಾಗಿ ಬೇಕಾದ ವಿಧಾನವಾದ ಪಾಠ್ಯಿಕ ವಿಶ್ಲೇಷಣೆಯೊಂದಿಗೆ ನೀವು ಆಳವಾಗಿ ತೊಡಗಿಸಿಕೊಂಡಿರುವ ರೀತಿಯಿಂದ ಬಹಳ ಹಿಂದಿನಿಂದಲೂ ಆಕರ್ಷಿತನಾಗಿದ್ದೇನೆ. ಒಂದು ದಶಕಕ್ಕೂ ಹಿಂದೆ, ನೀವು ಇಪಿಡಬ್ಲ್ಯು ಜರ್ನಲ್‌ನಲ್ಲಿ ರೀಡಿಂಗ್ ಟೆಕ್ಸ್ಟ್ ಅಂಡ್ ಟ್ರೆಡಿಶನ್ಸ್: ದಿ ಅಂಬೇಡ್ಕರ್–ಗಾಂಧಿ ಡಿಬೇಟ್ ಲೇಖನವನ್ನು ಪ್ರಕಟಿಸಿದ್ದಿರಿ. ಹಾಗೆಯೇ, ಈ ಸಂದರ್ಶನದ ಆರಂಭದಲ್ಲಿ ಹೆಸರಿಸಿದ ನಿಮ್ಮ ಇತ್ತೀಚಿನ ಪುಸ್ತಕ ಕೂಡ ಪಠ್ಯಗಳು ಮತ್ತು ಸಂಪ್ರದಾಯಗಳ ಕುರಿತು ಒಂದು ಅಧ್ಯಾಯದೊಂದಿಗೆ ನಿಮ್ಮ ಈ ದೀರ್ಘಕಾಲದ ಆಸಕ್ತಿಯನ್ನು ಮುಂದುವರಿಸುತ್ತದೆ. ನಿಮ್ಮ ಅಭಿಪ್ರಾಯದಲ್ಲಿ, ಯಾವುದೇ ಜ್ಞಾನಶಾಖೆಯಲ್ಲಿ ಪಠ್ಯಗಳ ಓದುವಿಕೆಯನ್ನು ನಿರ್ಣಾಯಕ ಅಭ್ಯಾಸವನ್ನಾಗಿ ಮಾಡುವುದು ಯಾವುದು?**

ಪಠ್ಯಗಳನ್ನು ಓದುವುದು ಮತ್ತು ವ್ಯಾಖ್ಯಾನಿಸುವುದು ರಾಜಕೀಯ ಸಿದ್ಧಾಂತದ ಅಧ್ಯಯನಕ್ಕೆ ಕೇಂದ್ರವಾಗಿದೆ. ಈ ಅನ್ವೇಷಣೆಯ ಮೂಲಕವೇ ರಾಜಕೀಯ ಜೀವನವನ್ನು ತಿಳಿಸುವ ಪ್ರಮುಖ ಪರಿಕಲ್ಪನೆಗಳನ್ನು ಅನುಮೋದಿಸಲಾಗುತ್ತದೆ, ಪ್ರಶ್ನಿಸಲಾಗುತ್ತದೆ ಮತ್ತು ತಿರಸ್ಕರಿಸಲಾಗುತ್ತದೆ. ಪಠ್ಯಗಳು, ಸಿದ್ಧಾಂತಗಳು ಮತ್ತು ವಾದಗಳನ್ನು ನಿರ್ಣಯಿಸಲು ಅಧ್ಯಯನಶಾಸ್ತ್ರೀಯ ಸಾಧನಗಳು ಹಾಗೂ ಸಮರ್ಥನೀಯ ಆಧಾರಗಳನ್ನು ಸಹ ನೀಡುತ್ತವೆ. ಸಾರ್ವಜನಿಕ ಮತ್ತು ಖಾಸಗಿ ಜೀವನವನ್ನು ಕ್ರಮಬದ್ಧಗೊಳಿಸುವಲ್ಲಿ ಪಠ್ಯಗಳು ಪ್ರಮುಖ ಪಾತ್ರ ವಹಿಸುವ ಎಲ್ಲೆಡೆಯು ಅಂತಹ ನಿಲುವು ಅನ್ವಯಿಸುವುದಾದರೂ, ಭಾರತದಲ್ಲಿ, ಪಠ್ಯಗಳನ್ನು ಓದುವುದು ಮತ್ತು ವ್ಯಾಖ್ಯಾನಿಸುವುದು, ಅದೆಷ್ಟೇ ವಿವಾದಾತ್ಮಕವಾಗಿದ್ದರೂ ಸಹ, ಒಂದು ಮಹತ್ವದ ಸಂಪ್ರದಾಯವನ್ನು ಹೊಂದಿದೆ. ಓರಿಯಂಟಲಿಸಂ ಈ ಸಂಪ್ರದಾಯಕ್ಕೆ ತನ್ನ ಕುರುಹುಗಳ ಮೂಲಕ ಛಾಪನ್ನೊತ್ತಲು ಪ್ರಯತ್ನಿಸಿದರೂ, ಈ ಸಂಪ್ರದಾಯವನ್ನು ಮರು ವ್ಯಾಖ್ಯಾನಿಸಲು ಶ್ರಮಿಸಿದ ಒಂದು ಗಣನೀಯ ರಾಷ್ಟ್ರೀಯತಾವಾದಿ ಚಿಂತನಾ ಸಂಪ್ರದಾಯವೇ ಇದೆ. ಅದು ಯಾವುದನ್ನು ಸ್ಥಳೀಯ ಚಿಂತನಾ ವಿಧಾನಗಳೆಂದು ಕರೆಯಲಾಗಿತ್ತೋ ಅಂತಹ ಹಾಗೂ ಪೌರಸ್ತ್ಯ ಚಿಂತನೆಯಂತಹದರ ವಿರುದ್ಧ ಹೋರಾಡುತ್ತದೆ. ಉದಾಹರಣೆಗೆ, ಬಂಕಿಮ್ ಚಂದ್ರರಿಂದ ಹಿಡಿದು ಇಂಗ್ಲಿಷ್ ಮತ್ತು ಭಾರತೀಯ ಭಾಷೆಗಳಲ್ಲಿನ ಹಲವಾರು ರಾಷ್ಟ್ರೀಯತಾವಾದಿ ಬರಹಗಾರರ ಭಗವದ್ಗೀತೆಯ ಮೇಲಿನ ವ್ಯಾಖ್ಯಾನಗಳನ್ನು ನೀವು ನೋಡಬಹುದು. ಅನೇಕ ರಾಷ್ಟ್ರೀಯತಾವಾದಿ ಚಿಂತಕರು ಈ ಕ್ಷೇತ್ರವನ್ನು ಹಿಡಿತದಲ್ಲಿಟ್ಟುಕೊಳ್ಳದೇ ಹೋದಲ್ಲಿ ರಾಷ್ಟ್ರೀಯತಾವಾದಿ ಯೋಜನೆಯು ಅನಿಶ್ಚಿತವಾಗಿ ಉಳಿಯುತ್ತದೆ ಎಂದು ನಂಬಿದ್ದರು.

ಆರಂಭದಿಂದಲೂ ಅಂಬೇಡ್ಕರ್‌ರವರು ರಾಷ್ಟ್ರದ ವಿಭಿನ್ನ ಪರಿಕಲ್ಪನೆಯನ್ನು ಅನ್ವೇಷಿಸಲು ಪಠ್ಯಗಳೊಂದಿಗೆ ತೊಡಗಿಸಿಕೊಳ್ಳುವುದು ಮುಖ್ಯವೆಂಬುದನ್ನು ಹಾಗೂ ತಮ್ಮ ಪ್ರಾಬಲ್ಯವನ್ನು ಬಲಪಡಿಸಲು ಅವುಗಳನ್ನು ಬಳಸಿಕೊಳ್ಳುವವರ ವಿರುದ್ಧ ಹೋರಾಡುವುದು ಕಡ್ಡಾಯವೆಂದು ಗುರುತಿಸಿದ್ದರು. ಈ ವಿಷಯದ ಬಗ್ಗೆ ಅವರು ಅನೇಕ ರಾಷ್ಟ್ರೀಯವಾದಿ ಚಿಂತಕರು ಮತ್ತು ಬರಹಗಾರರ ವಿರುದ್ಧ, ಅವರ ಸಬಾಲ್ಟರ್ನ್ ಆವೃತ್ತಿಗಳು ಸೇರಿದಂತೆ, ವಾದಿಸಿದ್ದಾರಾದರೂ, ಈ ವಿಷಯದ ಬಗ್ಗೆ ಗಾಂಧಿಯವರೊಂದಿಗಿನ ಅವರ ಸಂಬಂಧವು ಆಳವಾದುದು ಮತ್ತು ಸುದೀರ್ಘವಾದುದು.

ಪಠ್ಯಗಳ ಮೂಲಕ ಅಧಿಕಾರವನ್ನು ಹೇಗೆ ಮರುರಚಿಸಲಾಗುತ್ತದೆ ಎಂಬುದರ ಬಗ್ಗೆ ಅಂಬೇಡ್ಕರ್‌ರವರಿಗೆ ಆಳವಾಗಿ ತಿಳಿದಿತ್ತು. ಉದಾಹರಣೆಗೆ, ಭಗವದ್ಗೀತೆಯಂತಹ ಕೆಲವು ಪಠ್ಯಗಳ ನಿರ್ದಿಷ್ಟ ವ್ಯಾಖ್ಯಾನದ ಮೂಲಕ, ಒಂದು

